# ಚಂದ್ರಹಾಸನಭ್ಯುದಯ

ಪ್ರೊ. ಭುವನೇಶ್ವರಿ. ಜಿ

ಕೆ.ಎಲ್.ಇ ಎಸ್ ನಿಜಲಿಂಗಪ್ಪ ಕಾಲೇಜು

ಲಕ್ಷ್ಮೀಶನ ಕಾಲ ಕ್ರಿ. ಶ. 1550 ಈತ ಚಿಕ್ಕಮಗಳೂರು ಜಿಲ್ಲೆಯ ದೇವನೂರಿನವನು. ಈತನ ತಂದೆಯ ಹೆಸರು ಅಣ್ಣಮಾಂಕ - ಭಾರದ್ವಾಜ ಗೋತ್ರಕ್ಕೆ ಸೇರಿದವನು. ಈತನು ಯಾವ ಪೂರ್ವ ಕವಿಗಳನ್ನೂ ಹೆಸರಿಟ್ಟು ಕರೆಯದೆ, "ಪೂರ್ವ ಸತ್ಕವಿಗಳ್ಗೆ ನಮಿಸಿ, ನಾಂ ಕೃತಿ ಪೇಳ್ವೆನು" ಎಂದು ಸಾಮೂಹಿಕವಾಗಿ ಎಲ್ಲ ಕವಿಗಳನ್ನೂ ಕಾವ್ಯಾರಂಭದಲ್ಲಿ ನಮಿಸಿದ್ದಾನೆ. ಈತನ ಬಿರುದು "ಕರ್ಣಾಟ ಕವಿಚೈತ್ರವನ ಚೂತ". ಲಕ್ಷ್ಮೀಶ ಕವಿ ಸಂಸ್ಕೃತದ ಜೈಮಿನಿ ಭಾರತದ ವಸ್ತುವನ್ನು ಆಧರಿಸಿ ಕನ್ನಡದಲ್ಲಿ ವಾರ್ಧಕ ಷಟ್ಪದಿಯಲ್ಲಿ ಜೈಮಿನಿ ಭಾರತವನ್ನು ರಚಿಸಿದ್ದಾನೆ. ಒಟ್ಟು 31 ಸಂಧಿಗಳು 1907 ಪದ್ಯಗಳಿವೆ

ಕಥಾವಸ್ತು - ಮೇಲೆ ತಿಳಿಸಿದಂತೆ, ಕನ್ನಡ ಜೈಮಿನಿ ಭಾರತವು ಸಂಸ್ಕೃತ ಜೈಮಿನಿ ಭಾರತದ ಅನುವಾದ, ಕಥಾವಸ್ತುವು ಬಹುಮಟ್ಟಿಗೂ ಮೂಲವನ್ನೇ ಅನುಸರಿಸಿದೆ. ಮಹರ್ಷಿ ಜೈಮಿನಿಯು ಜನಮೇಜಯ ಮಹಾರಾಜನಿಗೆ ಕಥೆಯನ್ನು ಹೇಳಿದಂತಿದೆ. ಕವಿಯ ಜನ್ಮಸ್ಥಳವಾದ ದೇವನೂರಿಗೆ ಸಮೀಪವಾಗಿರುವ ಹಿರಿಯ ಮಗಳೂರು ಜನಮೇಜಯನು ಸರ್ಪಯಾಗ ಮಾಡಿದ ಸ್ಥಳವೆಂಬ ಪ್ರತೀತಿ ಇದೆ. ಮೂಲ ಸಂಸ್ಕೃತ ಜೈಮಿನಿಯಲ್ಲಿರುವ ನಕುಲೋಪಾಖ್ಯಾನವು ಕನ್ನಡದಲ್ಲಿ ಕಂಡು ಬರುವುದಿಲ್ಲ. ಮೂಲ ಸಂಸ್ಕೃತ ಕಾವ್ಯದಲ್ಲಿ ಇಲ್ಲದಿರುವ ಪುಂಡರೀಕನ ಹೆಸರು ಕನ್ನಡ ಜೈಮಿನಿಯಲ್ಲಿದೆ.

ಕರುಕ್ಷೇತ್ರ ಯುದ್ಧದಲ್ಲಿ ಜಯಿಸಿದ ಧರ್ಮರಾಯನ ಸಂಕಲ್ಪದಂತೆ ಕೃಷ್ಣನ ಬೆಂಬಲದಿಂದ ಅಶ್ವಮೇಧ ಯಾಗವನ್ನು ಕೈಗೊಳ್ಳುತ್ತಾರೆ. ಆ ಕುದುರೆಯು ಮೊದಲು ನೀಲಧ್ವಜನ ಮಾಹಿಷ್ಮತಿ ಪಟ್ಟಣವನ್ನು, ನಂತರ ಸೌಭರಿ ಮುನಿಯ ಆಶ್ರಮವನ್ನು, ಚಂದಕಾವತಿಯ ಹಂಸಧ್ವಜನ ರಾಜ್ಯಕ್ಕೆ, ಪ್ರಮೀಳೆಯ ದೇಶಕ್ಕೆ, ಭೀಷಣನ ರಾಜ್ಯಕ್ಕೆ ಹೊರಟು ಮುಂದೆ ಮಣಿಪುರದ ಬಭ್ರುವಾಹನನ ರಾಜ್ಯದಲ್ಲಿ, ರತ್ನಪುರದ ಮಯೂರಧ್ವಜನಲ್ಲಿ, ಸಾರಸ್ವತಪುರದವ ವೀರವರ್ಮನಲ್ಲಿ ಯುದ್ಧದಲ್ಲಿ ತೊಡಗಿ ಕೃಷ್ಣನ ಮಹಿಮೆಯಿಂದ ಗೆಲ್ಲುತ್ತಾ ಮುಂದೆಸಾಗುತ್ತಾರೆ.

ಮುಂದೆ ಕುದುರೆಯು ಕುಂತಳನಗರಕ್ಕೆ ಬರುವುದು, ಅದನ್ನು ಹುಡುಕಿ ಬರುವ ಅರ್ಜುನನಿಗೆ ದಿವ್ಯಜ್ಞಾನಿಗಳಾದ ನಾರದರೆ ಭಾಗವತ ಶಿರೋಮಣಿಯಾದ ಚಂದ್ರಹಾಸನ ಆಶ್ಚರ್ಯಕರವಾದ ಕಥೆಯನ್ನು ಹೇಳುವರು. ಕೇರಳವೆಂಬ ರಾಜ್ಯವನ್ನು ಆಳುತ್ತಿದ್ದ ಮೇಧಾವಿ-ಚಿತ್ರಬಾನು ದಂಪತಿಗಳಿಗೆ ಮೂಲನಕ್ಷತ್ರದಲ್ಲಿ ಜನಿಸುವ ಚಂದ್ರಹಾಸನಿಗೆ ಸ್ವಲ್ಪ ಕಾಲದಲ್ಲಿಯೇ ಯುದ್ಧಕ್ಕೆ ಹೊರಟ ತಂದೆ ಮೃತನಾಗಿ, ಆ ಸುದ್ದಿ ಕೇಳಿದ ಚಿತ್ರಬಾನು ಚಿತಾಪ್ರವೇಶಾ ಮಾಡಿದ ಕಾರಣ ಶತ್ರುಗಳು ರಾಜ್ಯವನ್ನು ಆಕ್ರಮಿಸಿಕೊಂಡಾಗ ಅನಾಥನಾಗುತ್ತಾನೆ. ಆ ಮಗುವನ್ನು ದಾಸಿ ಕುಂತಳ ನಗರದಲ್ಲಿ ಭಿಕ್ಷೆ ಬೇಡಿ ಪೋಷಿಸುತ್ತಿರಲಾಗಿ ಅನಾರೋಗ್ಯದಿಂದ ಆಕೆಯು ಮರಣವನ್ನಪ್ಪುತ್ತಾಳೆ. ನಾಗರಿಕರ ಆಶ್ರಯದಲ್ಲಿ ಬೆಳೆಯುವ ಚಂದ್ರಹಾಸನಿಗೆ ಸಾಲಿಗ್ರಾಮ ವಿಷ್ಣು ಶಿಲೆಯೆಂದೇ ಹೆಸರಾಗಿರುವುದು. ಸಿಕ್ಕು ಊಟವನ್ನು ಮಾಡುವಾಗ ಮಾತ್ರ ಬಿಟ್ಟು ಉಳಿದ ಸಮಯ ಬಾಯಲ್ಲಿರಿಸಿಕೊಂಡು ಆಟಪಾಠಗಳಲ್ಲಿ ಮುಂದಾಗಿ ಬೆಳೆಯುತ್ತಾನೆ

# ಚಂದ್ರಹಾಸನಭ್ಯುದಯ

. ೫ ವರ್ಷದ ಚಂದ್ರಹಾಸನನ್ನು ಆ ರಾಜ್ಯದ ಮಂತ್ರಿ ದುಷ್ಟಬುದ್ಧಿ ನಡೆಸುವ ಸಮಾರಂಭದ ಊಟಕ್ಕೆಂದು ಕರೆತಂದಾಗ ಬ್ರಾಹ್ಮಣರು ಚಂದ್ರಹಾಸನೇ ಕುಂತಳದ ರಾಜನಾಗುತ್ತಾನೆ ಎಂದು ಭವಿಷ್ಯ ನುಡಿಯುತ್ತಾರೆ. ಪುತ್ರ ಸಂತಾನವಿಲ್ಲದ ರಾಜನಿಗೆ ಚಂಪಕಮಾಲಿನಿ ಎಂಬ ಮಗಳಿದ್ದು ತನ್ನ ಮಗನಾದ ಮದನನೊಂದಿಗೆ ವಿವಾಹ ನೆರವೇರಿಸಬೇಕೆಂಬ ಆಸೆಯಿದ್ದ ದುಷ್ಟ ಬುದ್ಧಿಯೆಂಬ ಮಂತ್ರಿ, ಈ ಸುದ್ದಿ ಕೇಳಿ ಚಾಂಡಾಲರಿಗೆ ಆತನನ್ನು ಕರೆದೊಯ್ದು ಕೊಲ್ಲುವಂತೆ, ಅದರ ಕುರುಹಾಗಿ ಆತನ ದೇಹದಿಂದ ಯಾವುದಾದರೂ ಭಾಗವನ್ನು ಕತ್ತರಿಸಿ ತರುವಂತೆ ಆಜ್ಞಾಪಿಸಿದ.ವಿಷ್ಣುಭಕ್ತನಾದ ಚಂದ್ರಹಾಸನ ಭಕ್ತಿಯನ್ನು ಮೆಚ್ಚಿ ಚಾಂಡಾಲರು ಆತನ ಎಡಗೈಯ ಬೆರಳನ್ನು ಕತ್ತರಿಸಿ ತರುತ್ತಾರೆ. ಇದೇ ಸಮಯಕ್ಕೆ ಬೇಟೆಗೆ ಬಂದ ಮಕ್ಕಳಿಲ್ಲದ ಕುಳಿಂದಕನಿಗೆ ಚಂದ್ರಹಾಸ ದೊರೆತು ಅರಮನೆಗೆ ಕರೆತಂದು ನಾಮಕರಣ ಮುಂತಾಗಿ ಮಂಗಳಮಹೋತ್ಸವವನ್ನಾಚರಿಸಿ ಮಗನೆಂದೇ ಸ್ವೀಕರಿಸುತ್ತಾನೆ. ಹೀಗೆಮಂತ್ರಿಯಾದ ದುಷ್ಟಬುದ್ಧಿಯ ಕೆಟ್ಟ ಪ್ರಯತ್ನಗಳು ನಡೆಯದೆ ಭಗವದ್ಭಕ್ತನಾದ ಚಂದ್ರಹಾಸನ ಏಳ್ಗೆಯು ಶತಾಧಿಕವಾಗುವುದೆಂಬುದನ್ನು ಇಲ್ಲಿ ನಾವು ನೋಡಬಹುದು, ಭಗವದ್ಭಕ್ತರಿಗೆ ಎಂತಹ ಕಷ್ಟಬಂದರೂ ಅವರು ಪಾರಾಗುವರೆಂಬುದು ಇಲ್ಲಿ ನಿರೂಪಿಸಲ್ಪಟ್ಟಿದೆ.

ಚಂದ್ರಹಾಸನು ಕುಳಿಂದನ ಮಗನಾಗಿ, ದುಷ್ಟಬುದ್ಧಿಯ ಮಗಳಾದ ವಿಷಯೆಯನ್ನೂ, ಕುಂತಳೇಂದ್ರನ ಮಗಳಾದ ಚಂಪಕಮಾಲಿನಿಯನ್ನೂ ವಿವಾಹವಾಗಿ, ಭಾಗವತ ಶಿರೋಮಣಿ ಎನಿಸಿ ಅಭಿವೃದ್ಧಿಗೆ ಬಂದ ಕಥೆ ಇಲ್ಲಿ ನಿರೂಪಿತವಾಗಿದೆ. ಚಂದ್ರಹಾಸನ ಮಕ್ಕಳಾದ ಮಕರಧ್ವಜ, ಪದ್ಮಾಕ್ಷರು ಯಜ್ಞಾಶ್ವದ ಕುದುರೆಯನ್ನು ಹಿಡಿದಾಗ ಕೃಷ್ಣ ಭಕ್ತನಾದ ಚಂದ್ರಹಾಸನು ಕುದುರೆಯನ್ನು ಬಿಡುವಂತೆ ಮಕ್ಕಳಿಗೆ ತಿಳಿಸುತ್ತಾನೆ. ಕಡೆಗೆ ಶ್ರೀಕೃಷ್ಣನ ದಾಕ್ಷಿಣ್ಯಕ್ಕಾಗಿ ಅರ್ಜುನನನ್ನು ವಂದಿಸಿ ಯುಧಿಷ್ಠಿರನ ಅಶ್ವಮೇಧಕ್ಕೆ ಬೆಂಬಲವಾಗಿ ನಿಲ್ಲುವನು. ಕನ್ನಡ ಜೈಮಿನಿ ಭಾರತದಲ್ಲಿ ಈ ಕಥೆಯು ಕುತೂಹಲ ಜನಕವೆನಿಸಿ ಅತ್ಯಂತ ರಮಣೀಯವಾಗಿದೆ. ಕಾರಣ ಕೆಲವರ ಅಭಿಮತದಂತೆ ಈತ ಕನ್ನಡ ರಾಜ. ಕೊಪ್ಪಳ ತಾಲ್ಲೂಕಿನ ಕುಕನೂರನ್ನೇ ಕುಂತಳನಗರವೆಂದೂ, ಈ ಕತೆಯಲ್ಲಿ ಬರುವ ಬೇಡರ ರಾಜ ಕುಳಿಂದ ಶಿವಮೊಗ್ಗ ಪ್ರಾಂತ್ಯದ ಕುಬಟೂರಿನವನೆಂಬ ಇತಿಹಾಸದ ಅಂಶವು ಕತೆಯಲ್ಲಿದೆಯೆಂದು ಪ್ರತೀತಿಯಿದೆ.

೧. ಕುಳಿಂದಕನೆಂಬ ಬೇಡ ರಾಜ ಕಾಡಿನಲ್ಲಿ ಸಿಕ್ಕ ಚಂದ್ರಹಾಸನನ್ನು ಕರೆತಂದು ರಾಜ್ಯದಲ್ಲಿ ಪುತ್ರೋತ್ಸವ ನೆರವೇರಿಸಿ ತನ್ನ ಮಗನಂತೆ ಬೆಳೆಸುತ್ತಾನೆ. ನಾರದ ಮಹರ್ಷಿಗಳು ಕೇಳು ಅರ್ಜುನ ಕುಳಿಂದಕನ ಭವನದಲ್ಲಿ ಆ ಚಂದ್ರಹಾಸನೆಂಬ ಬಾಲಕ ಅಮೃತ ಕಿರಣಗಳಿಂದ ಕೂಡಿದ ಚಂದ್ರನ ರೀತಿಯಲ್ಲಿ ವರ್ಧಿಸುತ್ತಾ, ಜೊತೆಗೆ ಆ ರಾಜ್ಯದ ಸಂಪತ್ತು ಬೆಳೆದು, ಜೊತೆಗೆ ಆ ಪಟ್ಟಣದ ಜನರು ವಿಮಲ ಗುಣಶೀಲರಾಗಿ ಮೆರೆದರು. ಇದರೊಂದಿಗೆ ಅಲ್ಲಿ ಕೊಡದಷ್ಟು ಹಾಲನ್ನು ಕೊಡುವ ಆಕಳು ಜೊತೆಗೆ ಮಳೆ ಬಿದ್ದು ರೈತರು ಶ್ರಮ ಪಡದೆ ಬೆಳೆ ಬೆಳೆಯ ತೊಡಗಿದರು. ಹೀಗೆ ಈ ಉತ್ಕೃಷ್ಟೆಯು ಚಂದ್ರಹಾಸನ ಕಾರಣವಾಗಿ ಹೇಗೆ ಕುಳಿಂದಕನ ರಾಜ್ಯ ಸಮೃದ್ಧಿಯನ್ನು ಹೊಂದಿತು ಎಂಬುದು ತಿಳಿಸುತ್ತದೆ.

# ಚಂದ್ರಹಾಸನಭ್ಯುದಯ

೧. ಹೀಗಿರಲು ಆತನಿಗೆ ಎಂಟು ವರ್ಷವಾದಾಗ ಉಪನಯನವನ್ನು ಮಾಡಿ ಧಾರ್ಮಿಕ ಸಂಸ್ಕಾರಗಳನ್ನು ನೀಡುವ ಸಲುವಾಗಿ ಆತನಿಗೆ **64** ವಿದ್ಯೆಗಳನ್ನು ಕಲಿಸಿದನು ವೇದ ನೀತಿ ಶಬ್ದ ಶಾಸ್ತ್ರ ಸಿದ್ಧಾಂತ ಮುಂತಾದವುಗಳನ್ನು ಗುರುಗಳಿಂದ ಕಲಿತು ಬಿಲ್ ವಿದ್ಯೆಯನ್ನು ಅರಿತು ಗಜ ಕುದುರೆ ರಥಗಳನ್ನು ಮುನ್ನಡೆಸುವಷ್ಟು ಚತುರತೆಯನ್ನು ಹೊಂದಿದನು

೩. **16** ವರ್ಷ ಪ್ರಾಯದ ಚಂದ್ರಹಾಸನು ಬಲವಂತನಾಗಿ ತನ್ನ ರಥಿಕರೊಂದಿಗೆ ಸೇರಿಕೊಂಡು ತನ್ನ ತಂದೆಯನ್ನು ವಿರೋಧಿಸುವ ಎಲ್ಲ ರಾಜರನ್ನು ಸೋಲಿಸಿ ಅವರ ಮೇಲೆ ದಿಗ್ವಿಜಯವನ್ನು ಕೈಕೊಂಡು ಕುಳಿಂದಕನು ಆಳುವ ನಾಡನ್ನು ಅಲ್ಲದೆ ಎಂಟು ದೆಸೆಯ ಸೀಮೆಗಳನ್ನು ಆತ ಸೋಲಿಸಿ ಅವರಿಂದ ಕಪ್ಪ ಕಾಣಿಕೆಗಳನ್ನು ತನ್ನ ಪುರಕ್ಕೆ ತರಿಸಿದನು.

೪. ಹೀಗೆ ಚಂದ್ರಹಾಸನು ತಾನು ಅರಮನೆಗೆ ಕಪ್ಪ ಕಾಣಿಕೆಗಳನ್ನು ತಂದು ತೋರಿಸುತ್ತಿರುವುದನ್ನು ಕಂಡ ಕುಳಿಂದಕನು ಚಕ್ರಾಧಿಪತ್ಯವನ್ನು ತನ್ನ ಮಗನಿಗೆ ಶುಭ ಮುಹೂರ್ತದಲ್ಲಿ ವಹಿಸಿದನು. ಆನಂತರದಲ್ಲಿ ಚಂದ್ರಹಾಸನು ಆ ಚಂದನ ವತಿಯನ್ನು ಪಾಲಿಸುತ್ತಿದ್ದನು ಹೀಗೆ ಹಾ ನಾಡಿನ ಸಿರಿ ತುಂಬಿ ತುಳುಕಾಡಿತು ಆ ಪಟ್ಟಣದ ಸೌಭಾಗ್ಯವು ಹೆಚ್ಚಾಯಿತು ಜನರಲ್ಲಿ ಆಚಾರ ಗುಣ ದಾನ ಧರ್ಮಗಳಿಂದ ವೈಷ್ಣವ ಧರ್ಮದ ಬೆಳವಣಿಗೆ ಯಾಯಿತು

೫. ಅಚಲವಾದ ವಿಷ್ಣು ಭಕ್ತಿಯಲ್ಲಿ ಪ್ರಹ್ಲಾದನಂತೆ, ಹರಿಧ್ಯಾನದಿಂದ ದ್ರುವನಂತೆ,ಸತ್ವದಿಂದ ಬಲಿಚಕ್ರವರ್ತಿಯಾಗಿ ಶಾಂತತೆಯನ್ನು ಹೊಂದಿದ ವಿಭೀಷಣನಾಗಿ ಕಲೆಗೆ ವೈಷ್ಣವಭರಣನೆಂದು ಹೆಸರಾಗಿ ಭೂಮಿಯಲ್ಲಿ ರುಕ್ಮಾಂಗದನಾಗಿ ಹೆಚ್ಚಾದ ಕೀರ್ತಿಯಿಂದ ಪುಂಡರೀಕನಾಗಿ ಸತ್ ಚಾರಿತ್ರೆಯನ್ನು ಹೊಂದಿದ ಚಂದ್ರಹಾಸನು ಈ ಭೂಮಿಯಲ್ಲಿ ಅವರೆಲ್ಲರಿಗಿಂತ ಶ್ರೇಷ್ಠನಾಗಿ ವಿಷ್ಣು ಭಕ್ತನಾಗಿ ಅಂದರೆ ಭಾಗವತ ಶಿರೋಮಣಿಯಾಗಿ ಖ್ಯಾತಿ ಪಡೆದಿದ್ದಾನೆ

೬.ಹೀಗಿರಲು ಒಂದುದಿನ ರಾಜರಿಂದ ಪ್ರತಿವರ್ಷ ತಪ್ಪದೇ ತತ್ಕಾಲದಲ್ಲಿ ಕೊಡುವಂತಹ ಕಪ್ಪ ಕಾಣಿಕೆ ಅಂದರೆ ಸಿದ್ದಾಯವನ್ನು ದುಷ್ಟಬುದ್ಧಿ ಎಂಬ ಮಂತ್ರಿಗೆ ನೀಡಿ ಅದರ ಜೊತೆಗೆ ಗೌರವ ಕಾಣಿಕೆಯನ್ನು ರಾಣಿಗೆ ಪುರೋಹಿತನಾದ ಗಾವಲನಿಗೆ ಪ್ರೀತಿಯಿಂದ ನೀಡಬೇಕಾದದ್ದು ನಮ್ಮ ಕರ್ತವ್ಯ ಮಗನೇ ಹೀಗಾಗಿ ಸಕಾಲದಲ್ಲಿ ಅವರಿಗೆ ಅದನ್ನು ಸಲ್ಲಿಸು ಆ ಹಣವನ್ನು ಉಳಿಸಿಕೊಳ್ಳುವ ಯೋಚನೆ ಮಾಡಿ ಅಸೂಯೆಗೆ ವರ್ಷವಾಗಬೇಡ ಎಂದು ತನ್ನ ಮಗನಿಗೆ ಕುಳಿಂದಕನು ತಿಳಿಸಿದನು

೭. ತಂದೆಯ ಮಾತನ್ನು ಕೇಳಿದ ಚಂದ್ರಹಾಸನು ರಾಜನಿಗೆ ರಾಣಿಗೆ ದುಷ್ಟಬುದ್ಧಿಗೆ ಗಾವಲನೆಂಬ ಪುರೋಹಿತನಿಗೆ ನೀಡುವ ಕಪ್ಪ ಕಾಣಿಕೆಯ ಜೊತೆಗೆ ತಾನು ಯುದ್ಧದಲ್ಲಿ ಶತ್ರು ರಾಜರನ್ನು ಜೈಸಿ ತಂದ ವಸ್ತುಗಳನ್ನು ವಿಶೇಷವಾದ ಮುದ್ರೆಯೊಂದಿಗೆ ಕಟ್ಟಿ ಒಂಟೆ ಕುದುರೆ ಆನೆಗಳ ಮೇಲೆ ಹೇರಿ ನೂರರ ಸಂಖ್ಯೆಯಂತೆ ಅದನ್ನು ಆಪ್ತಸೇವಕರ ಜೊತೆಗೆ ಕುಂತಳ ನಗರಕ್ಕೆ ಕಳುಹಿಸಿಕೊಟ್ಟನು

೮.ಆನೆ ಕುದುರೆ ರತ್ನ ವಸ್ತ್ರಾಭರಣ ಕರ್ಪೂರ ಕಸ್ತೂರಿ ಶ್ರೀಗಂಧ ಚಿನ್ನ ವಜ್ರ ಮುಂತಾಗಿ ಬೆಲೆಬಾಳುವ ವಸ್ತ್ರಾಭರಣಗಳನ್ನು ಕೊಂಡು ಚಂದ್ರಹಾಸನ ಸೇವಕರು ನಗರದ ಉಪವನದಲ್ಲಿನ ನದಿಯಲ್ಲಿ ಮಿಂದು ಸ್ನಾನಾಧಿ ಕರ್ಮಗಳನ್ನು ಪೂರೈಸಿ ಸಂಜೆಯ ಹೊತ್ತಲ್ಲಿ ಆ ಪಟ್ಟಣವನ್ನು ಪ್ರವೇಶಿಸಿದರು.

# ಚಂದ್ರಹಾಸನಭ್ಯುದಯ

೯. ಅಶುಭ ಕೋಟಿಯನ್ನು ನಾಶಪಡಿಸುವ ಏಕಾದಶಿ ವ್ರತವಿರುವ ಕಾರಣ ನಮಗೆ ಶುಭ್ರ ನೀರಿನ ಸ್ನಾನವಾಯಿತು. ನಮ್ಮ ರಾಜನು ಕುಶಲರವಾಗಿದ್ದಾನೆ ಆತನ ಮಗ ಚಂದ್ರಹಾಸನ ಆಳ್ವಿಕೆಯಲ್ಲಿ ಆತನ ಆಜ್ಞೆಯಂತೆ ಏಕಾದಶಿ ಎಂದು ವಿಷ್ಣುವಿಗೆ ಈ ಉತ್ಸಹ ಜರುಗುತ್ತದೆ ಯಾವುದೇ ಕಷ್ಟಗಳಿಂದ ಎಲ್ಲಾ ಜನರು ಹರಿ ಭಕ್ತರಾಗಿ ಸನ್ಮಾರ್ಗದಲ್ಲಿ ನೆಮ್ಮದಿಯಿಂದ ಬಾಳುತ್ತಿದ್ದಾರೆ

೧೦. ಈ ಮಾತನ್ನು ಕೇಳಿದ ದುಷ್ಟಬುದ್ಧಿಗೆ ಇದು ಆಶ್ಚರ್ಯದ ಸಂಗತಿ ಕುಳಿಂದ ಕನಿಗೆ ಮಗ ಜನಿಸಿದ್ದಾನೆ ಆತನ ಪತ್ನಿ ಬಂಜೆಯಾಗಿದ್ದಾಳೆ ಎಂದು ಹೇಳಲು ಸೇವಕರು ಇದು ಸುಳ್ಳಲ್ಲ ಬೇಟೆಗೆ ಹೋದ ಕುಡಿಂದಕನಿಗೆ ಕಾಡಿನ ಮಧ್ಯದಲ್ಲಿ ಅನಾಥ ಶಿಶುವಾಗಿ ಸಿಕ್ಕ ಮಗುವನ್ನು ನಿಧಿಯಂತೆ ತಂದು ಆತನಿಗೆ ಚಂದ್ರಹಾಸನೆಂದು ನಾಮಕರಣ ಮಾಡಿ ಪುತ್ರನೆಂದು ಸ್ವೀಕರಿಸಿದನು ಎಂದು ಆ ಸೇವಕರು ತಿಳಿಸಿದರು.

೧೧. ದುಷ್ಟಬುದ್ಧಿಯು ತಕ್ಷಣ ವಿಷಯೆ ಎಂಬ ಮಗಳನ್ನು ಮನೆಗೆ ಕಳುಹಿಸಿ ರಾಜ ಕಾರ್ಯಕ್ಕಾಗಿ ಮಗನಾದ ಮದನನನ್ನು ನಿಯಮಿಸಿ ತನ್ನ ಸೇವಕರ ಸಮೇತ ಹೊರಟು ಎರಡು ದಿನಗಳ ಒಳಗೆ ಕುಂತಳ ನಗರವನ್ನು ಮುಟ್ಟಿದನು. ಕಾಡೆಲ್ಲವೂ ನಾಡಾಗಿ ಬದಲಾದ ಬಗೆಗೆ ಮನದಲ್ಲಿ ಮತ್ಸರವನ್ನು ಪಟ್ಟು ಹೊರಗೆ ಮೆಚ್ಚಿದಂತವನಾಗಿ ತಲೆದುಗುತ್ತಾ ಇರಲು ಆತನನ್ನು ಹೆಚ್ಚಾದ ಸತ್ಕಾರಗಳಿಂದ ಕುಳಿಂದಕನು ಚಂದನಾವತಿಗೆ ಬರಮಾಡಿಕೊಂಡರು

೧೨. ಆ ದಿನ ಬ್ರಾಹ್ಮಣರು ಎನ್ನೊಡ ನಾಡಿದ ಮಾತು ಫಲಿಸದೇ ಬಿಡದು ಈತನು ರಾಜ ಲಕ್ಷಣಗಳೊಂದಿಗೆ ಶೋಭಿಸುತ್ತಿರುವನು ಈತನೇನಾದರೂ ಬಂಧಿಸಿದರೆ ಖಂಡಿತ ನಮ್ಮ ರಾಜ್ಯಕ್ಕೆ ಅರಸನಾಗುವನು ಬಳಿಕ ತನ್ನ ಮಗನಾದ ಮದನನಿಗೆ ಅರಸುತನ ಸಿಗದು ಈತ ಶಕ್ತಿವಂತನು ಹೌದು ಈತನನ್ನು ಹೆದರಿಸುವುದು ಅಸಾಧ್ಯ ಹೀಗಾಗಿ ಈತನನ್ನು ಕುಟಿಲೋ ಪಾಯದಿಂದ ವಿಷ ಹುಣಿಸೆ ಕೊಳ್ಳುವೆನೆಂದು ದುಷ್ಟಬುದ್ಧಿ ಆಲೋಚಿಸಿದನು.

೧೩. ಪೂರ್ಣಚಂದ್ರನ ಏಳಿಗೆಯನ್ನು ಕೆಡಿಸುವ ಕತ್ತಲಿನಂತೆ ಈತನಿಗೆ ತನ್ನ ನಿಜರೂಪವನ್ನು ತೋರಿಸುವೆನೆಂದು ಆ ವಿಷ್ಣು ಭಕ್ತ ನನ್ನು ಕೊಂದಿಸಿ ತಾನು ಬಾಳುವೆ ಎಂಬ ಕಾರ್ಯದಲ್ಲಿ ಆ ಕೆಟ್ಟಮತಿ ಹೊಂದಿರುವ ದುಷ್ಟ ಬುದ್ಧಿ ಎಂಬ ಮಂತ್ರಿಯು ಒಂದು ಲೇಖನವನ್ನು ಏಕಾಂತದಲ್ಲಿ ಬರೆದು ಅದಕ್ಕೆ ಎಚ್ಚರದಿಂದ ರಾಜಾಂಕಿತವನ್ನು ಮಾಡಿ ಚಂದ್ರಹಾಸನನ್ನು ಕಂಡು ನಸುನಗುತ ಹೀಗೆಂದನು.

೧೪. ತನಗೆ ಅತಿ ಮುಖ್ಯವಾದ ಒಂದು ಕಾರ್ಯವಿದೆ ಹಾಗಾಗಿ ಚಂದ್ರಹಾಸ ನಿನ್ನೊಂದಿಗೆ ನಾಲ್ವರು ಸೇವಕರನ್ನು ಕರೆಸಿಕೊಂಡು ಕುದುರೆಯಲ್ಲಿ ತೆರಳಿ ಕುಂತಲದಲ್ಲಿರುವ ನನ್ನ ಮಗ ಮದನನಿಗೆ ಈ ಪತ್ರವನ್ನು ಯಾರಿಗೂ ತಿಳಿಯದಂತೆ ಕೊಡು ಮತ್ತು ನಮ್ಮಿಬ್ಬರಿಗೆ ಈ ವಿಚಾರ ತಿಳಿದಿರಲಿ ಎಂದು ಮಂತ್ರಿ ಆ ಲೇಖನ ಪತ್ರವನ್ನು ನೀಡಿದನು.

೧೫. ಚಂದ್ರಹಾಸನು ನಾಲ್ವರು ಸೇವಕರೊಂದಿಗೆ ಕುದುರೆಯಲ್ಲಿ ಹೊರಡುವಾಗ ದಾರಿಯಲ್ಲಿ ಕಂಡ ಶುಭ ಶಕುನಗಳ ಸಮೂಹವನ್ನೇ ಕಾಣುತ್ತಾ ಕುಂತಳಪುರದ ಬಾಹ್ಯ ಉಪವನಕ್ಕೆ ಬಂದಾಗ ಆತನನ್ನು ಕೋಗಿಲೆಯ ನಾದದ ಬಾಧ್ಯ ಮೇಳಗಳು , ಮರ ಗಿಡಗಳಲ್ಲಿ ಫಲಪುಷ್ಪಗಳು ಕೈ ನೀಡಿ ಸ್ವಾಗತ ಕೋರಿದವು ಎಂಬಂತೆ ಆ ನಗರ ಶೋಭಿಸುತ್ತಿತ್ತು.

೧೬.ಆ ಕುಂತಳ ನಗರದ ಉಪವನವನ್ನು ಪ್ರವೇಶಿಸಿ ಎಲೆ ಚಿಗುರುಗಳ ಗೊಂಚಲುಗಳನ್ನು ಹಾಸಿ ಕುಳಿತನು. ಚಂದ್ರಹಾಸನಿಗೆ ನಡು ಹಗಲ ಬೇಸಿಗೆಯ ತಾಪದಲ್ಲಿ ಪ್ರಯಾಣಿಸಿದ ಬಳಲಿಕೆಯ ಕಾರಣವಾಗಿ ಆ ವನದ ತಂಪಾದ ಗಾಳಿಯು ಸೊಗಸಿಂದ ಬೀಸಲು ಆತನ ಕಣ್ಣೆವೆ ಮುಚ್ಚಿ ನಿದ್ರಾವಶನಾದನು. ಈ ರೀತಿಯಲ್ಲಿ ತಾನು ಮಾಡಬೇಕಾದ ಬಹುಮುಖ್ಯ ಕಾರ್ಯವನ್ನು ಮರೆತು ಆತ ದೇವಲೋಕದಲ್ಲಿ ಶೇಷ ಶಯನದಲ್ಲಿ ಲಕ್ಷ್ಮಿಕಾಂತ ಮಲಗುವ ರೀತಿಯಲ್ಲಿ ನಿದ್ರಿಸಿದನು.